ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಡುತೋಪು ನಿರ್ಮಾಣಕ್ಕೆ ತಗುಲಿದ ಖರ್ಚು:

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 462 (309)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಅರಣ್ಯೀಕರಣ (ನೆಡುತೋಪು) ನಿರ್ಮಾಣಕ್ಕೆ ತಗಲಿದ ವೆಚ್ಚವೆಷ್ಟು, (ತಾಲ್ಲೂಕುವಾರು ವಿವರ ನೀಡುವುದು)

ಆ) ಎಷ್ಟು ಎಕರೆ ಸ್ಥಳದಲ್ಲಿ ಗಿಡಗಳನ್ನು ನಡೆಲಾಗಿದೆ.

ಇ) ಪ್ರತಿ ಗಿಡಕ್ಕೆ ತಗುಲುವ ವೆಚ್ಚ ಎಷ್ಟು ? (ಗಿಡದ ಗುಂಡಿ ನೆಡು ಮತ್ತು ಗಿಡದ ಪೂರ್ಣ ವೆಚ್ಚ ತಿಳಿಸುವುದು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ವೃಕ್ಷ ನೆಡುತೋಪು ನಿರ್ಮಾಣಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ವ್ಯಯ ಮಾಡಿದ ಹಣದ ವಿವರವು ಈ ಕೆಳಕಂಡಂತಿರುವುದು.

		1993-94	1994-95	1995-96
1.	ಮಂಗಳೂರು	0.205	1.847	5.531
2.	ಬೆಳ್ತಂಗಡಿ	3.571	6.613	3.104
3.	ಪುತ್ತೂರು	5.852	12.194	7.240
4.	ಸುಳ್ಯ	2.926	2.931	2.315
5.	ಬಂಟ್ವಾಳ	4.252	5.131	8.590
6.	ಉಡುಪಿ	3.229	7.975	10.031
7.	ಕಾರ್ಕಳ	2.748	11.875	19.358
8.	ಕುಂದಾಪುರ	3.131	12.555	9.627
	ಜಿಲ್ಲೆಯ ಒಟ್ಟು	25.924	61.121	55.796

ಆ) ಕಳೆದ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬೆಳೆಸಲಾಗಿರುವ ವೃಕ್ಷ ನೆಡುತೋಪುಗಳ ವಿವರಗಳು ಈ ಕೆಳಕಂಡಂತಿವೆ.

1993-94	224.5 ಹೆಕ್ಟೇರು ಮತ್ತು 3. ಕಿಲೋ ಮೀಟರ್
1994-95	351.29 ಹೆಕ್ಟೇರು ಮತ್ತು 88 ಕಿಲೋ ಮೀಟರ್
1995-96	457 ಹೆಕ್ಟೇರು ಮತ್ತು 32 ಕಿಲೋ ಮೀಟರ್

ಇ) ಸಸಿ ಬೆಳೆಸುವಂದಿನಿಂದ ಅದನ್ನು ನೆಡುತೋಪಿನಲ್ಲಿ ನೆಟ್ಟು ಆವುಗಳನ್ನು ರಕ್ಷಿಸಲು ಪ್ರತಿ ಸಸಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಿರುವ ಪೆಚ್ಚಿದ ವಿವರವು ಈ ಕೆಳಕಂಡಂತಿರುವುದು.

		1993-94	1994-95	1995-96
1.	ಸಸಿಯ ಬೆಲೆ	ರೂ.0.80	1.00	1.25
2.	ಗಿಡದ ಗುಂಡಿ	ರೂ. 1.60	2.05	1.30
3.	ಗೊಬ್ಬರ	ರೂ.0.35	0.35	0.35
4.	ನೆಡುವ ಕೂಲಿ	ರೂ.0.52	0.61	0.93
5.	ರಕ್ಷಣೆ	ರೂ. 1.59	1.75	4.07
6.	ಇತರೆ	ರೂ.0.70	0.81	1.35
	ಒಟ್ಟು	ರೂ. 5.56	6.57	10.25

ಮೇಲ್ಕಂಡ ಮೊತ್ತದಲ್ಲಿವಲ್ಲಿ ಸಸಿಯಿಂದ ಸಸಿಗೆ ಮತ್ತು ವರ್ಷದಿಂದ ವರ್ಷಕ್ಕೆ ಸಸಿಗಳ ಗಾತ್ರ, ಸಸಿಗಳನ್ನು ನೆಡುವ ಪ್ರದೇಶದ ಕಾನ್‌ಫ್ಯೂಗಿರೇಷನ್ ಪ್ರತಿ ಹೆಕ್ಟೇರ್‌ಗೆ ಮಾತ್ರ ಮಾಡಿರುವ ಸಸಿಗಳ ಸಂಖ್ಯೆ ಮತ್ತು ಸಸ್ಯ ಕ್ಷೇತ್ರದಿಂದ ಸಸಿ ನೆಡುವ ಪ್ರದೇಶಕ್ಕಿರುವ ದೂರವನ್ನು ಅವಲಂಬಿಸಿ ವ್ಯತ್ಯಾಸವಿರುತ್ತದೆ.

ವಿಷಯ:- ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ನಿಗದಿತ ಸೀಟುಗಳಿಗಿಂತ ಹೆಚ್ಚಿನ ಸೀಟುಗಳ ದಾಖಲಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 463 (838)

ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95 ಮತ್ತು 1995-96ರಲ್ಲಿ ಎಷ್ಟು ಖಾಸಗಿ ಇಂಜಿನಿಯರಿಂಗ್ ಕಾಲೇಜಗಳು ಸರ್ಕಾರವು ನಿಗದಿ ಮಾಡಿದ ಸೀಟಿಗಿಂತ ಹೆಚ್ಚಾಗಿ ಎಷ್ಟು ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಂಡಿವೆ. (ವಿವಿಧ ಕಾಲೇಜುಗಳು ದಾಖಲಾತಿ ಮಾಡಿಕೊಂಡ ವಿದ್ಯಾರ್ಥಿಗಳ ಸಂಖ್ಯೆಗಳ ವಿವರ ಒದಗಿಸುವುದು?)